**ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು ನ್ಯಾಯಾಲಯ, ಕಲಘಟಗಿ**

**ಸಿಸಿ ನಂ 133/2021**

**ಸತ್ಯ ಪ್ರತಿಜ್ಞೆಯ ಮೇರೆಗೆ ದಿನಾಂಕ 17-01-2026 ರಂದು ಪ್ರಮಾಣ ಮಾಡಿಸಲಾಯಿತು**

| | | | |
|---|---|---|---|
| **ಸಾಕ್ಷಿಯ ಹೆಸರು** | ಃ | ಪರಮೇಶ್ವರ ಕವಟಗಿ | **ಪ್ರಾ.ಸಾ ಃ 12** |
| **ತಂದೆ ಃ ಗಂಡ ಹೆಸರು** | ಃ | ಗುರುಸಿದ್ದಪ್ಪ | **ಚಾ.ಸಾ ಃ 12** |
| **ವಯಸ್ಸು** | ಃ | 42 ವರ್ಷ | |
| **ಉದ್ಯೋಗ** | ಃ | ಪೋಲೀಸ ಇನ್ಸಪೇಕ್ಟರ, ಕರ್ನಾಟಕ ಲೋಕಾಯುಕ್ತ, ಗದಗ | |
| **ವಾಸಸ್ಥಳ** | ಃ | ಗದಗ | |

**ಮುಖ್ಯ ವಿಚಾರಣೆ ಃ ಮಾನ್ಯ ಸ.ಸ.ಅ. ರವರಿಂದಃ**

ದಿನಾಂಕ 13.08.2016 ರಿಂದ 29.09.2017 ರವರೆಗೆ ಕಲಘಟಗಿ ಪೋಲೀಸ ಠಾಣೆಯಲ್ಲಿ ಪಿ ಎಸ್ ಐ ಎಂದು ಕರ್ತವ್ಯನಿರ್ವಹಿಸಿದ್ದೇನೆ.

ದಿನಾಂಕ 06.04.2017 ರಂದು ಸಾಯಂಕಾಲ 4-00 ಗಂಟೆಗೆ ನ್ಯಾಯಾಲಯದಿಂದ ಬಂದ ಖಾಸಗಿ ದೂರನ್ನು ಆದರಿಸಿ ಪ್ರಕರಣವನ್ನು ದಾಖಲಿಸಿಕೊಂಡು ಪ್ರಥಮ ವರ್ತಮಾನ ವರದಿಯೊಂದಿಗೆ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಫಿರ್ಯಾದಿಯ ಪ್ರತಿಯನ್ನು ನಿಪಿ-28 ಎಂದು ಗುರುತಿಸಲಾಯಿತು. ಪ್ರಥಮ ವರ್ತಮಾನ ವರದಿಯನ್ನು ನಿಪಿ-29, ಸಾಕ್ಷಿ ಸಹಿಯನ್ನು ನಿಪಿ-29(ಎ) ಎಂದು ಗುರುತಿಸಲಾಯಿತು.

ದಿನಾಂಕ 07.04.2017 ರಂದು ಬ್ಯಾಂಕಿಗೆ ಭೇಟಿ ನೀಡಿ ಪಂಚರ ಸಮಕ್ಷಮ ನಿಪಿ-13 ರಂತೆ ಪಂಚನಾಮೆ ಜರುಗಿಸಿರುತ್ತೇನೆ. ನಿಪಿ-13 ರಲ್ಲಿರುವ ತನ್ನ ಸಹಿ ನೋಡಿ ಸಾಕ್ಷಿ ಗುರುತಿಸಿದ್ದು ಅದನ್ನು ನಿಪಿ-13(ಸಿ) ಎಂದು ಗುರುತಿಸಲಾಯಿತು. ನಿಪಿ-13 ರಲ್ಲಿ ದಿನಾಂಕವನ್ನು ತಪ್ಪಾಗಿ ದಿನಾಂಕ 06.04.2017 ಎಂದು ನಮೂದಿಸಲಾಗಿದೆ. ಮುಂದಿನ ತನಿಖೆಯನ್ನು ಚಾಸಾ-13 ರವರಿಗೆ ವಹಿಸಿಕೊಟ್ಟಿರುತ್ತೇನೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ**

ನಾನು ಫಿರ್ಯಾದಿ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಂಡಿದ್ದೇನೆಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಗುನ್ಹೆ ಸ್ಥಳಕ್ಕೆ ಭೇಟಿ ನೀಡಿ ಸ್ಥಳದಲ್ಲಿ ಪಂಚರ ಸಮಕ್ಷಮ ನಿಪಿ-13 ರಂತೆ ಪಂಚನಾಮೆ ಜರುಗಿಸಿದ್ದೇನೆಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ಪಂಚನಾಮೆಯನ್ನು ಕಚೇರಿಯಲ್ಲಿಯೇ ತಯಾರಿಸಿದ್ದೇನೆ ಅಂದರೆ ಸರಿಯಲ್ಲ. ನಾನು ಪಂಚನಾಮೆಯನ್ನು ಕಚೇರಿಯಲ್ಲಿ ತಯಾರಿಸಿದ್ದರಿಂದ ದಿನಾಂಕ ತಪ್ಪಾಗಿ ಅಂದರೆ ಸರಿಯಲ್ಲ.

(ಸಾಕ್ಷಿ ವಿಚಾರಣೆಯನ್ನು ವ್ಯಾಟ್ಸಪ್ ಮೊಬೈಲ ವಿಡಿಯೋ ಕಾಲ ಮುಖಾಂತರ ಪಡೆದುಕೊಂಡಿದ್ದು ಸಾಕ್ಷಿ ಸಹಿ ಇರುವುದಿಲ್ಲ)

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು,
ಕಲಘಟಗಿ.